# ವರ್ತಮಾನದಲ್ಲಿ ಕನ್ನಡದ ಅಸ್ಮಿತೆ–ತಾತ್ವಿಕತೆಯ ಒಳನೋಟ.

ಪ್ರಕಾಶ ಬಿ.[1]

Article Link: https://aksharasurya.com/2023/10/prakasha-b/

## ABSTRACT:

ಸಮಕಾಲಿನ ಅಗತ್ಯಗಳಿಗೆ ಕನ್ನಡವನ್ನು ಸಜ್ಜುಗೊಳಿಸಬೇಕು. ಕನ್ನಡ ಅಭಿಮಾನ ರೋಚಕತೆಯ ಬದಲು ರಚನಾತ್ಮಕವಾಗಬೇಕು ರಚನಾತ್ಮಕತೆಯನ್ನು ಸ್ಥಾಪಿಸುವ ಕನ್ನಡ ಸೈದ್ಧಾಂತಿಕತೆ ನಮ್ಮದಾಗಬೇಕು. ಹೊಸ ಸಮಸ್ಯೆ ಸವಾಲುಗಳ ಸಂದರ್ಭದಲ್ಲಿ ರೂಪಿಸುವ ಅಸ್ಮಿತೆಯ ಯೋಜನೆಗಳ ಅಗತ್ಯವನ್ನು ನಾವು ಮನಗಾಣಬೇಕಾಗಿದೆ ಈ ದಿಕ್ಕಿನಲ್ಲಿ ಇಂದಿನ ಪೀಳಿಗೆಗೆ ಕನ್ನಡದ ಪರಂಪರೆಯನ್ನು ಪರಿಚಯಿಸಿ ಅಸ್ಮಿತೆಗಾಗಿ ಶ್ರಮಿಸಬೇಕಾದ ತುರ್ತಿದೆ.

## KEY WORDS:

ಕನ್ನಡ ಪ್ರಜ್ಞೆ, ಕನ್ನಡ ತಂತ್ರಾಂಶ, ಕನ್ನಡದ ಅಸ್ಮಿತೆ, ರಾಷ್ಟ್ರೀಯ ಶಿಕ್ಷಣ ನೀತಿ.

ದೇಶ ಸ್ವಾತಂತ್ರ್ಯ ಪಡೆದು ಏಳು ದಶಕಗಳಾಗುತ್ತಾ ಬಂದರೂ ನಮಗೆ ಒಂದು ರಾಷ್ಟ್ರೀಯ ಶಿಕ್ಷಣ ನೀತಿಯನ್ನು ರೂಪಿಸಲು ಸಾಧ್ಯವಾಗದೇ ಇರುವುದು ಶೋಚನೀಯ ಸಂಗತಿ. 134 ವರ್ಷಗಳಷ್ಟೇ ಹಿಂದೆ ಜ್ಯೋತಿಬಾಪುಲೆಯವರು ಶಿಕ್ಷಣವನ್ನು ಸಾರ್ವತ್ರಿಕಗೊಳಿಸಬೇಕೆಂದು ಮೆಕಾಲೆಶಿಕ್ಷಣ ನೀತಿಯ ಪರಿಣಾಮಗಳನ್ನು ಅಭ್ಯಾಸಿಸಲು ಬಂದ ಹಂಟರ್ ಕಮಿಷನ್‌ಗೆ ಮನವಿ ಸಲ್ಲಿಸಿರುವುದು ಇತಿಹಾಸವಾಗಿದೆ. ಕನಿಷ್ಠ ಪ್ರಾಥಮಿಕ ಶಿಕ್ಷಣದಲ್ಲಿ ಸಮಾನತೆಯನ್ನು ತರಬೇಕೆನ್ನುವುದು ಅವರ ಆಶಯವಾಗಿತ್ತು ಅದಿನ್ನು ಆಶಯವಾಗಿಯೇ ಉಳಿದಿದೆ. 2021 ರಲ್ಲಿ ಕರ್ನಾಟಕದಲ್ಲಿ ಜಾರಿಗೆ ತಂದ ರಾಷ್ಟ್ರೀಯ ಶಿಕ್ಷಣ ನೀತಿ ಉನ್ನತ ಶಿಕ್ಷಣದಲ್ಲಿ ಇಡೀ ದೇಶದಲ್ಲಿ ಮೊದಲು ಜಾರಿಯಾಗಿದೆ ಇದರ ಮೂಲಕ ಪದವಿ ಶಿಕ್ಷಣದಲ್ಲಿ ಇಡಿಯಾಗಿ ಓದುತ್ತಿದ್ದ ಮೂರು ವಿಷಯಗಳ ಬದಲಿಗೆ ಎರಡು ವಿಷಯಗಳು ಡಿಎಸ್‌ಸಿ ಎಂದು, ಮತ್ತೊಂದು ಮುಕ್ತ ಆಯ್ಕೆಯಾಗಿ ಸೇ–ರಿತು. ವಿದ್ಯಾರ್ಥಿಗಳು ಬಿ.ಎ. ಪದವಿ ಸಂದರ್ಭದಲ್ಲಿ ನೇರವಾಗಿ ಇತಿಹಾಸ ಅರ್ಥಶಾಸ್ತ್ರ ಎರಡನ್ನು ಆಯ್ಕೆಮಾಡಿಕೊಂಡು ಮುಕ್ತ ಆಯ್ಕೆಯಲ್ಲಿ ರಾಜ್ಯಶಾಸ್ತ್ರವನ್ನು ಮತ್ತೊಂದು ವಿಷಯವನ್ನಾಗಿ ಓದುವ ಹಂಬಲದೊಂದಿಗೆ ಹೆಚ್ಚು ವಿದ್ಯಾರ್ಥಿಗಳು

1. ಸಹಾಯಕ ಪ್ರಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಶಿರಸಿ.

ಬರುತ್ತಿದ್ದಾರೆ. ಇದು ಅರ್ಜಿ ಹಾಕುವ ಅಂಗಡಿಯವನನ್ನು ಸೇರಿಸಿ ಉಂಟಾಗುವ ಅಜ್ಞಾನದಿಂದಲೂ ಸೇರುತ್ತದೆ. ಕಾಲೇಜಿನ ಪ್ರವೇಶಾತಿ ಸಮಯದಲ್ಲಿ ಕನ್ನಡ ವಿಷಯದ ಬಗ್ಗೆ ಒಂದಷ್ಟು ಭಾಷಣ ಮಾಡಿದರೆ ಕನ್ನಡವನ್ನು ಕೇವಲ ಭಾಷೆಯನಷ್ಟೇ ಓದುತ್ತೇವೆ ಅದು ಕೂಡ ಆಯ್ಕೆ ಎಂಬ ಮನೋಧೋರಣೆಯಲ್ಲಿ ವಿದ್ಯಾರ್ಥಿಗಳು ಪ್ರವೇಶಾತಿ ಪಡೆದುಕೊಳ್ಳುತ್ತಿದ್ದಾರೆ. ಐಚ್ಛಿಕ ಕನ್ನಡ ಎಂದರೆ ಹಳಗನ್ನಡ, ಹಳಗನ್ನಡ ವ್ಯಾಕರಣ ಎಂದು ಪೂರ್ವಗ್ರಹ ಪೀಡಿತರಾಗಿ ಬರುವ ವಿದ್ಯಾರ್ಥಿಗಳಿಂದ ಇತರ ವಿಷಯ ಅಧ್ಯಾಪಕರ ದಾರಿ ತಪ್ಪಿಸುವ ಕೆಲಸವೂ ನಡೆಯುತ್ತಿದೆ. ಕನ್ನಡ ಬೋಧಿಸುವ ಅಧ್ಯಾಪಕರ ನಿರಾಸಕ್ತಿಯು ಕಾರಣವಾಗಿದೆ. ಕನ್ನಡ ಭಾಷೆ ಮತ್ತು ಸಾಹಿತ್ಯದ ಅಸ್ತಿತ್ವ ದಾರಿ ಮುಚ್ಚುವ ಎಲ್ಲ ಲಕ್ಷಣಗಳನ್ನು ನಾವಿಂದು ಕಾಣುತ್ತಿದ್ದೇವೆ. ಕರ್ನಾಟಕದ ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ ಅಂತಹ ಪ್ರದೇಶಗಳಲ್ಲಿ ಇದು ಇನ್ನೂ ಅತ್ಯಂತ ಖೇದಕರ ಸ್ಥಿತಿಯನ್ನು ತಲುಪಿದೆ. ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಭಾಷೆಯ ಸ್ಥಾನಮಾನದಲ್ಲಿ ಯಾವುದಾದರೂ ಎರಡು ಭಾಷೆಯನ್ನು ಮುಕ್ತವಾಗಿ ಆಯ್ಕೆ ಮಾಡಿಕೊಳ್ಳುವ ಸಂವಿಧಾನ ಬದ್ಧ ಹಕ್ಕನ್ನು ಸುಪ್ರೀಂಕೋರ್ಟ್ ಕೂಡ ಎತ್ತಿ ಹಿಡಿದಿರುವುದು ಕಂಡುಬಂದಿದೆ. ಈ ಸವಾಲುಗಳ ನಡುವೆ ಸ್ಥಳೀಯ ಖಾಸಗಿ, ಅನುದಾನಿತ, ಸರ್ಕಾರಿ ಇತ್ಯಾದಿಯಾಗಿ ವಿಂಗಡಗೊಂಡಿರುವ ಶಾಲಾ–ಕಾಲೇಜುಗಳು ಇಂದು ಶ್ರೀಮಂತ ಅತಿ ಶ್ರೀಮಂತ,ಮಧ್ಯಮ ವರ್ಗ, ಬಡವ ಮತ್ತು ಕಡುಬಡವರಿಗೆ ಹಂಚಿಕೆಯಾಗಿರುವಂತೆ ತೋರುತ್ತದೆ. ಕನ್ನಡ ಭಾಷೆಯನ್ನುಮಧ್ಯಮ ಹಾಗೂ ಬಡವರ ಭಾಷೆಯಾಗಿ ಕಾಣಲಾಗುತ್ತಿದೆ. ಯಾವ ಭಾಷೆ ಸಾಹಿತ್ಯದ ಮೂಲಕ ಧರ್ಮ, ವರ್ಗ, ಜಾತಿ, ಲಿಂಗ ಪ್ರದೇಶಗಳನ್ನು ಮೀ–ರಿದ ಶಿಕ್ಷಣ ನೀತಿಯನ್ನು ರೂಪಿಸುವುದು ಸಾಧ್ಯವಾಗುತ್ತಿತ್ತು ಅಂತಹ ಭಾಷೆ ಸಾಹಿತ್ಯ ಕಣ್ಮರೆಯಾಗುವ ಆತಂಕವನ್ನು ನಾವು ಇಂದು ಕಾಣುತ್ತಿದ್ದೇವೆ. ಹದುಳದ ನಾಡನ್ನು ಕಟ್ಟುವ ಮುಂಗಾಣಿಕೆಯಿಂದ ಚೆಲುವಾದ ಭಾಷೆಯು ಅತ್ಯುತ್ತಮ ಮನಸ್ಸಿನಿಂದಲೂ ಲೋಕ ಪ್ರೀತಿಯಿಂದಲೂ ಹುಟ್ಟುತ್ತದೆ. ಹೀಗಾಗಿಯೇ ಘನತೆ ವ್ಯಕ್ತಿತ್ವಗಳನ್ನು ಕಳೆದುಕೊಳ್ಳುವಾಗ ಭಾಷೆಗೆ ಸತ್ವವನ್ನೆರೆದ ಮತ್ತು ಕೂಡಿ ಬಾಳಿನ ದಾರಿಗಾಣಿಸುವ ಶಕ್ತಿಗಳನ್ನು ಕಳೆದುಕೊಳ್ಳುತ್ತಿರುತ್ತೇವೆ.

ಕನ್ನಡದ ಅನೇಕ ಸಾಹಿತಿಗಳು ಈ ಸಾಲಿನಲ್ಲಿ ಕಂಡು ಬರುತ್ತಾರೆ. ಕನ್ನಡ ಭಾಷೆ ಕಣ್ಮರೆಯಾಗುವಂತೆ ಕರ್ನಾಟಕದಲ್ಲಿ ಕನ್ನಡ ತನ್ನ ಶಕ್ತಿ ಚೈತನ್ಯದ ಮೂಲವೊಂದನ್ನುಕಳೆದುಕೊಳ್ಳುವ ದುಗುಡದ ಗಳಿಗೆಯಲ್ಲಿ ನಾವಿದ್ದೇವೆ. ಆದರೆ ಕನ್ನಡ ಭಾಷೆ ನೆಲೆಯಿಂದ ಬದುಕಿನ ನೆಲೆಗೆ ಅಭಿಮಾನವು ಸ್ಥಳಾಂತರ ಗೊಳ್ಳುವ ಅಥವಾ ವಿಸ್ತಾರಗೊಳ್ಳುವ ಸಂದರ್ಭದಲ್ಲಿ ಕನ್ನಡವನ್ನು ಉಳಿಸುವ ಮತ್ತು

ಬೆಳೆಸುವ ಸವಾಲುಗಳನ್ನು ನಾವಿಂದು ಎದುರಿಸುತ್ತಿದ್ದೇವೆ. ಕನ್ನಡವನ್ನು ಉಳಿಸುವ ಮಾತನಾಡುವವರು ಕನ್ನಡಿಗರನ್ನು ಉಳಿಸುವ ಮಾತಾಡದಿದ್ದರೆ ಅಭಿಮಾನ ಅರ್ಧ ಸತ್ಯವಾಗುತ್ತದೆ. ಒಂದು ಭಾಷೆ ಉಳಿಯುವುದು ಜನಗಳಿಂದ ಆದ್ದರಿಂದ ಜನರನ್ನು ಉಳಿಸುವ ಕ್ರಿಯಾಭಾಗವಾಗಿಯೇ ಭಾಷೆಯನ್ನು ಉಳಿಸುವ ಮಾತು ಹೊರಹೊಮ್ಮಬೇಕು. ಭಾಷೆಯನ್ನು ಉಳಿಸಿ ಎನ್ನುವಾಗ ಅದರೊಳಗೆ ಜನರನ್ನು ಉಳಿಸಿ ಎಂಬ ಅರ್ಥವು ಸೇರಿಕೊಂಡಿರಬೇಕು. ಜನರ ಬದುಕು ಮತ್ತು ಭಾಷೆಯ ಅವಿನಾಭಾವ ಸಂಬಂಧದಲ್ಲಿ ಅನಾವರಣಗೊಳ್ಳುವ ಅಭಿಮಾನ ಹೆಚ್ಚು ತಾತ್ವಿಕವೂ ಸಾರ್ಥಕವೂ ಆಗಿರುತ್ತದೆ. ಬದುಕಿನ ಭಾಗವಾಗಿ ಭಾಷೆಯನ್ನು ಭಾಷೆಯ ಮೂಲ ದ್ರವ್ಯವಾಗಿ ಬದುಕನ್ನು ಪರಿಭಾವಿಸಿ ಬೆಳೆಯುವ ಶಿಕ್ಷಣವನ್ನು ನಾವು ಇಂದು ಗ್ರಹಿಸಬೇಕಾಗುತ್ತದೆ. ವರ್ತಮಾನದಲ್ಲಿ ಕನ್ನಡ ಭಾಷೆಯ ಪರಿಸ್ಥಿತಿಯು ಎಂತಹ ಸ್ಥಿತಿಯನ್ನು ತಲುಪಿದೆ ಎಂಬುದನ್ನು ಕುವೆಂಪುರವರ ಈ ಕೆಳಗಿನ ಪದ್ಯದ ಸಾಲುಗಳು ಸಾಕ್ಷಿಯಾಗಿವೆ.

**ರಾಜನುಡಿಯೊಂದುಂದು ರಾಷ್ಟ್ರ ನುಡಿಯೆಂದೊಂದು**
**ದೇವನುಡಿಯೊಂದೊಂದು ಹತ್ತಿ ಜಗ್ಗಿ**
**ನಿರಿನಿಟಿಲು ನಿಟಲೆಂದು ಮೂದಿಮೂಳೆ ಮುರಿಯುತಿದೆ**
**ಕನ್ನಡಮ್ಮನ ಬೆನ್ನು ಬಳುಕಿ ಬಗ್ಗಿ.**

ಇಲ್ಲಿ ಕನ್ನಡದ ಮೇಲೆ ಸಂಸ್ಕೃತ, ಇಂಗ್ಲಿಷ್ ಮತ್ತು ಹಿಂದಿಗಳು ಹೇಗೆ ಸವಾರಿ ಮಾಡುತ್ತಿವೆ ಎಂಬುದನ್ನು ಪ್ರತಿಪಾದಿಸಿರುವುದು ಅರ್ಥವಾಗುತ್ತದೆ. ದೇವ ಭಾಷೆ ಎಂದು ಕರೆಸಿಕೊಂಡ ಸಂಸ್ಕೃತ ಜನರಿಂದ ದೂರ ಹೋದರೂ ಪ್ರತಿಷ್ಠಿತ ಪೂಜ್ಯತೆಯನ್ನು ಪಡೆಯುತ್ತಿದೆ. ಈ ದೇಶದ ಅನೇಕ ಭಾಷೆಗಳಲ್ಲಿ ಒಂದಾದ ಹಿಂದಿ, ರಾಷ್ಟ್ರೀಯ ಭಾಷೆಯ ಬಿಗುಮಾನ ತೋರಿಸುತ್ತಿದೆ ಬಹಳಷ್ಟು ಜನರಿಗೆ ಇಂಗ್ಲಿಷ್ ಶಿಕ್ಷಣದಿಂದ ಪ್ರಯೋಜನವಿದೆ ಎಂಬ ನಂಬಿಕೆ ಇದ್ದು ವ್ಯಾಮೋಹವಾಗಿ ವಿಸ್ತ–ರಿಸಿದೆ. ಕನ್ನಡ ಭಾಷೆ ಹೊರನೋಟದ ಅಭಿಮಾನವಾಗಿ ಮಾತ್ರ ಉಳಿದಿದೆ. ಕನ್ನಡ ಕನ್ನಡಿಗರು ಉಳಿಯಬೇಕೆಂದರೆ ಕನ್ನಡವನ್ನು ಶೈಕ್ಷಣಿಕವಾಗಿ ಸಾಂಸ್ಕೃತಿಕವಾಗಿ ಉಳಿಸಿ ಬೆಳೆಸಬೇಕು. ಉದ್ಯೋಗ ವಲಯದಲ್ಲಿ ಕನ್ನಡವನ್ನು ಮತ್ತು ಕನ್ನಡಿಗರನ್ನು ಪರಿಗಣಿಸಬೇಕು. ಆಡಳಿತದಲ್ಲಿ ಕನ್ನಡ ಕಡ್ಡಾಯವಾಗಿ ಅನುಷ್ಠಾನಗೊಳ್ಳಬೇಕು. ಆರ್ಥಿಕ ಮತ್ತು ಸಾಮಾಜಿಕ ಬೆಳವಣಿಗೆಯನ್ನು ಒಳಗೊಂಡ ಭಾಷೆಯಾಗಬೇಕು. ಶಿಕ್ಷಣ ಕ್ಷೇತ್ರದಲ್ಲಿ ಕನ್ನಡದ ಸ್ಥಾನಮಾನವನ್ನು ಗಟ್ಟಿಗೊಳಿಸುವುದಕ್ಕೆ ಆದ್ಯತೆ ನೀಡಿದರೆ ಕನ್ನಡವು ಮುಂದಿನ ಪೀಳಿಗೆಗೆ ವಿಸ್ತರಿಸಲ್ಪಡುತ್ತದೆ. ಒಂದು ಪರಂಪರೆ ನಿರ್ಮಾಣ–ಕ್ಕೆ ಪೂರಕವಾದ ಪ್ರಕ್ರಿಯೆ ಆಗಿದೆ ಎಂದು ಬರಗೂರು ರಾಮಚಂದ್ರಪ್ಪ ರವರು

ತಿಳಿಸುತ್ತಾರೆ. ಬಿ.ಇ., ಎಂ.ಬಿ.ಬಿ.ಎಸ್., ಬಿ.ಡಿ.ಎಸ್., ಪಾಲಿಟೆಕ್ನಿಕ್ ಮುಂತಾದ ವೃತ್ತಿ ಶಿಕ್ಷಣ ಎಲ್ಲ ಸ್ನಾತಕ ಮತ್ತು ಸ್ನಾತಕೋತ್ತರ ಪದವಿಗಳಲ್ಲಿ ಕನ್ನಡದ ಅಸ್ಮಿತೆ ಇರಬೇಕಾದರೆ ಒಳ ಮೀಸಲಾತಿ ಅನಿವಾರ್ಯ ಎಂಬುದನ್ನು ರಾಮಚಂದ್ರಪ್ಪನವರು ತಿಳಿಸುತ್ತಾರೆ. ಶಿಕ್ಷಣದಲ್ಲಿ ಕನ್ನಡ ಎಂದರೆ ಪ್ರಾಥಮಿಕ ಪೂರ್ವದಿಂದ ಪ್ರಾರಂಭಿಸಿ ಪ್ರಾಥಮಿಕ ಹಂತದಲ್ಲಿ ಒಂದು ಮಾಧ್ಯಮವಾಗಿ ಅನಂತರದಲ್ಲಿ ವಿಶೇಷವಾಗಿ ವೃತ್ತಿ ಶಿಕ್ಷಣದಲ್ಲಿ ಒಂದು ಭಾಷೆಯಾಗಿ ಅಳವಡಿಸಿಕೊಳ್ಳುವುದು ಬಹು ಮುಖ್ಯ. ವರ್ತಮಾನದಲ್ಲಿ ಕನ್ನಡದ ಅಸ್ಮಿತೆಗಾಗಿ ತೇಜಸ್ವಿ ನೀಡಿರುವ ಕೆಲವು ಪ್ರಮುಖ ಸಲಹೆಗಳನ್ನು ಇಂದು ನಾವು ಅನುಸರಿಸಬೇಕಾಗುತ್ತದೆ. ಒಂದು ಭಾಷೆಯಲ್ಲಿ ಅತ್ಯಂತ ಮೇಧಾವಿಗಳು ಇದ್ದರೂ ಎಷ್ಟು ಜ್ಞಾನಪೀಠ ಪ್ರಶಸ್ತಿಗಳು ಬಂದಿದ್ದವು.

ಎಷ್ಟು ಅದ್ದೂರಿಯ ಸಾಹಿತ್ಯ ಸಮ್ಮೇಳನಗಳು ನಡೆದವು ಇತ್ಯಾದಿಗಳೆಲ್ಲ ಒಂದು ಭಾಷೆಯ ಅಭಿವೃದ್ಧಿಗೆ ಪರೋಕ್ಷವಾಗಿ ಸಹಾಯ ಮಾಡುತ್ತವಾದರೂ ಇವುಗಳಿಗಿಂತ ಅತ್ಯಂತ ಮುಖ್ಯವಾದದ್ದು ಒಂದು ಭಾಷೆಯ ಅಳಿವು ಉಳಿವನ್ನು ನೇರವಾಗಿ ನಿರ್ಧರಿಸುವುದು ಅದರ ಜನ ಬಳಕೆ. ಯಾವ ಪ್ರಶಸ್ತಿ ಸರ್ಕಾರದ ಅನುದಾನಗಳು ಆ ಭಾಷೆಯ ಸಾಹಿತ್ಯ ಸಮ್ಮೇಳನಗಳು ಭಾವನಾತ್ಮಕ ಭಾಷಾಭಿಮಾನ ಚಳುವಳಿ ಇತ್ಯಾದಿಗಳು ಯಾವುವು ಆ ಭಾಷೆಯನ್ನು ಉಳಿಸಲಾರವು. ಇದಕ್ಕೆ ಸಂಸ್ಕೃತವೇ ಜ್ವಲಂತ ಉದಾಹರಣೆ. ಕಂಪ್ಯೂಟರ್, ಸಮಾಜದ ಎಲ್ಲಾ ಕ್ಷೇತ್ರಗಳಲ್ಲೂ ಸರ್ವ ವ್ಯಾಪಿಯಾಗಿ ಆವರಿಸುತ್ತಿದೆ ನಾವು ಕಂಪ್ಯೂಟರ್ ನಲ್ಲಿ ಇಂಗ್ಲಿಷ್ ಭಾಷೆಯಷ್ಟೇ ಸರ್ವ ಸಮರ್ಥವಾಗಿ ನಮ್ಮ ಭಾಷೆಯನ್ನು ಬಳಸಲು ಸಾಧ್ಯವಾಗದಿದ್ದರೆ ನಮ್ಮ ಭಾಷೆಯನ್ನು ಉಳಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಇಂಟರ್ನೆಟ್ ಆಗಮನದೊಂದಿಗೆ ಐ.ಟಿ. ಕ್ಷೇತ್ರ ಅಡೆತಡೆ ಇಲ್ಲದ ವೇಗದಲ್ಲಿ ವೈದ್ಯಕೀಯ ಕ್ಷೇತ್ರದಿಂದ ಹಿಡಿದು ವ್ಯಾಪಾರ ವಹಿವಾಟಿನವರೆಗೆ ತ್ರಿವಿಕ್ರಮ ಸದೃಶವಾಗಿ ಆಕ್ರಮಿಸುತ್ತಿದೆ ಇಮೇಲ್, ಇ–ವಾಣಿಜ್ಯ, ಇ–ಆಡಳಿತ ಇತ್ಯಾದಿಗಳನ್ನು ಎಲೆಕ್ಟ್ರಾನಿಕ್ ಮಾಧ್ಯಮಕ್ಕೆ ಹಸ್ತಾಂತ–ರಿಸಲಾಗುತ್ತಿದೆ. ವಾಣಿಜ್ಯ ಮತ್ತು ಆಡಳಿತವೇ ನಮ್ಮ ದೈನಂದಿನ ವ್ಯವಹಾರಗಳ ಮುಕ್ಕಾಲು ಅಂಶವಾಗಿರುವುದರಿಂದ ಎಲೆಕ್ಟ್ರಾನಿಕ್ ಮಾಧ್ಯಮದಲ್ಲಿ ಕನ್ನಡವನ್ನು ಸಮರ್ಥವಾಗಿ ಉಪಯೋಗಿಸಲಾಗದಿದ್ದರೆ ಕನ್ನಡದ ದಿನ ಬಳಕೆ ಸಂಪೂರ್ಣ ಸ್ಥಗಿತವಾಗುತ್ತದೆ. ಕನ್ನಡಕ್ಕಿರುವ ಸದ್ಯದ ಸೀಮಿತ ಮಾರುಕಟ್ಟೆ ದೆಸೆಯಿಂದ ಖಾಸಗಿ ಕಂಪನಿಗಳಲ್ಲಿ ಕನ್ನಡದ ಬಳಕೆ ಅಷ್ಟಕಷ್ಟೇ. ಕನ್ನಡ ತಂತ್ರಾಂಶದ ಅಭಿವೃದ್ಧಿಯ ಮೂಲಕ ಇಂಗ್ಲೀಷ್‌ನಷ್ಟು ಸಮರ್ಥ ಕನ್ನಡ ತಂತ್ರಾಂಶ ಅಭಿವೃದ್ದಿಯಾಗುವುದರ ಅಗತ್ಯತೆಯಿಂದ ಕನ್ನಡದ ಅಸ್ಮಿತೆ ಸಾಧ್ಯವಾಗುತ್ತದೆ ಎಂಬ ಅಭಿಪ್ರಾಯವನ್ನು ತೇಜಸ್ವಿ ತಿಳಿಸುತ್ತಾರೆ.

ಸಮಕಾಲಿನ ಅಗತ್ಯಗಳಿಗೆ ಕನ್ನಡವನ್ನು ಸಜ್ಜುಗೊಳಿಸಬೇಕು. ಕನ್ನಡ ಅಭಿಮಾನ ರೋಚಕತೆಯ ಬದಲು ರಚನಾತ್ಮಕವಾಗಬೇಕು ರಚನಾತ್ಮಕತೆಯನ್ನು ಸ್ಥಾಪಿಸುವ ಕನ್ನಡ ಸೈದ್ಧಾಂತಿಕತೆ ನಮ್ಮದಾಗಬೇಕು. ಹೊಸ ಸಮಸ್ಯೆ ಸವಾಲುಗಳ ಸಂದರ್ಭದಲ್ಲಿ ರೂಪಿಸುವ ಅಸ್ಮಿತೆಯ ಯೋಜನೆಗಳ ಅಗತ್ಯವನ್ನು ನಾವು ಮನಗಾಣಬೇಕಾಗಿದೆ ಈ ದಿಕ್ಕಿನಲ್ಲಿ ಇಂದಿನ ಪೀಳಿಗೆಗೆ ಕನ್ನಡದ ಪರಂಪರೆಯನ್ನು ಪರಿಚಯಿಸಿ ಅಸ್ಮಿತೆಗಾಗಿ ಶ್ರಮಿಸಬೇಕಾದ ತುರ್ತಿದೆ.

**ಪರಾಮರ್ಶನ ಗ್ರಂಥಗಳು:**

1. ಬರಗೂರು ರಾಮಚಂದ್ರಪ್ಪ, ಕನ್ನಡ ಅಭಿಮಾನ: ಕನ್ನಡ ಪ್ರಜ್ಞೆ (2007), ಕನ್ನಡ ವಿಶ್ವವಿದ್ಯಾಲಯ. ಹಂಪಿ
2. ರಾಜೇಶ್ವರಿ ತೇಜಸ್ವಿ, ನನ್ನ ತೇಜಸ್ವಿ (2011), ಪುಸ್ತಕ ಪ್ರಕಾಶನ, ಮೈಸೂರು.
3. ರಹಮತ್ ತರೀಕೆರೆ, ನುಡಿಯ ಚೆಲುವು: ಹಾಸುಹೊಕ್ಕು (2020), ನವಕರ್ನಾಟಕ ಪ್ರಕಾಶನ, ಬೆಂಗಳೂರು.
4. ಮೂಡ್ನಾಕೂಡು ಚಿನ್ನಸ್ವಾಮಿ, ಸಮಾನ ಶಿಕ್ಷಣ, ಬಹುತ್ವದ ಭಾರತ ಮತ್ತು ಬೌದ್ಧ ತಾತ್ವಿಕತೆ (2018), ಲಡಾಯಿ ಪ್ರಕಾಶನ, ಗದಗ.